# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮರಿತಿಬ್ಬೇಗೌಡ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1063

ಉತ್ತರಿಸಬೇಕಾದ ದಿನಾಂಕ : 21.09.2021

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ (ಪ್ಯಾಕ್ಸ್) ರೈತರು ಆರ್.ಟಿ.ಸಿ ನೀಡುವ ಮೂಲಕ ಚಿನ್ನಾಭರಣದ ಮೇಲೆ ಅಡಮಾನ ಸಾಲ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು,<br>ಕೊಡಗು, ಬೀದರ್, ಚಿತ್ರದುರ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳಲ್ಲಿ ಮಾತ್ರ ರೈತರಿಂದ ಆರ್.ಟಿ.ಸಿ ಪಡೆಯುವ ಮೂಲಕ ಚಿನ್ನಾಭರಣದ ಮೇಲೆ ಅಡಮಾನ ಸಾಲ ನೀಡಲಾಗುತ್ತಿದೆ. |
| ಆ) | ಸದರಿ ಅಡಮಾನ ಸಾಲಕ್ಕೆ ಶೇಕಡಾ ಎಷ್ಟು ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ; | ರೈತರು ಆರ್.ಟಿ.ಸಿ ನೀಡುವ ಮೂಲಕ ಚಿನ್ನಾಭರಣದ ಮೇಲಿನ ಅಡಮಾನ ಸಾಲಕ್ಕೆ ಚಿನ್ನಾಭರಣ ಸಾಲದ ಬಡ್ಡಿ ದರಕ್ಕಿಂತ ಶೇ.1 ರಷ್ಟು ಕಡಿಮೆ ಬಡ್ಡಿ ದರ ವಿಧಿಸುತ್ತಿದ್ದು, ಮಾಹಿತಿ ಈ ಕೆಳಗಿನಂತಿರುತ್ತದೆ. (see table below) |
| ಇ) | ನಿಗಧಿತ ಅವಧಿಯೊಳಗೆ ಸಾಲ ಮರುಪಾವತಿ ಮಾಡಿದವರಿಗೆ ಯಾವುದೇ ರಿಯಾಯಿತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |

| ಕ್ರ.ಸಂ | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಹೆಸರು | ಚಿನ್ನಾಭರಣ ಸಾಲಗಳಿಗೆ ಬಡ್ಡಿ ದರ (ಶೇ.) | ಪಹಣಿ ಪಡೆದು ರೈತರಿಗೆ ನೀಡುವ ಚಿನ್ನಾಭರಣ ಸಾಲಗಳಿಗೆ ಆಕರಣೆ ಮಾಡುವ ಶೇಕಡಾ ಬಡ್ಡಿ ದರ |
|---|---|---|---|
| 1 | ಕೊಡಗು | 8.50 | 7.50 |
| 2 | ಬೀದರ್ | 10.00 | 9.00 |
| 3 | ಚಿತ್ರದುರ್ಗ | 10.00 | 9.00 |

....2

| | | |
|---|---|---|
| ಈ) | ವಾಣಿಜ್ಯ ಬ್ಯಾಂಕುಗಳಲ್ಲಿ ಸದರಿ ಸಾಲದ ಸಂಬಂಧ ನಿಗಧಿತ ಅವಧಿಯೊಳಗೆ ಸಾಲ ಮರುಪಾವತಿಸಿದವರಿಗೆ ಶೇ.3 ರಷ್ಟು ರಿಯಾಯಿತಿ ನೀಡುತ್ತಿರುವಂತೆ ಸಹಕಾರಿ ಬ್ಯಾಂಕುಗಳಲ್ಲೂ ರಿಯಾಯತಿ ನೀಡದಿರಲು ಕಾರಣಗಳೇನು; | ಚಿನ್ನಾಭರಣದ ಮೇಲೆ ನೀಡುವ ಅಡಮಾನ ಸಾಲಕ್ಕೆ ಸರ್ಕಾರದಿಂದ ಯಾವುದೇ ಬಡ್ಡಿ ಸಹಾಯಧನ ಲಭ್ಯವಿರುವುದಿಲ್ಲ.<br>ಕೇಂದ್ರ ಸರ್ಕಾರದ ಪತ್ರ ಸಂಖ್ಯೆ ಎಫ್-1-20/2018-ಕ್ರೆಡಿಟ್-1 ದಿ:23-1-2020 ರಲ್ಲಿ ದಿ:01-04-2020 ರಿಂದ ಅನ್ವಯವಾಗುವಂತೆ ವಾಣಿಜ್ಯ ಬ್ಯಾಂಕುಗಳು ಒಳಗೊಂಡಂತೆ ಎಲ್ಲಾ ಬ್ಯಾಂಕುಗಳು ರೈತರಿಗೆ ನೀಡುವ ಚಿನ್ನಾಭರಣ ಸಾಲದ ಖಾತೆಗಳನ್ನು ಕಿಸಾನ್ ಕ್ರೆಡಿಟ್ ಕಾರ್ಡ್ ಖಾತೆಗಳಾಗಿ ಪರಿವರ್ತಿಸಿ ಅಂತಹ ಸಾಲಗಳಿಗೆ ಮಾತ್ರ ಶೇ.2 ರ ಬಡ್ಡಿ ಸಬ್‌ವೆನ್ಷನ್ ಮತ್ತು ಶೇ.3 ರ ಪ್ರೋತ್ಸಾಹಧನ ಕ್ಲೇಮು ಮಾಡಲು ಕಡ್ಡಾಯಗೊಳಿಸಿರುತ್ತದೆ. |
| ಉ) | ಯಾವ ಕಾಲಮಿತಿಯಲ್ಲಿ ರಿಯಾಯತಿಯನ್ನು ನೀಡಲಾಗುವುದು? | ಅನ್ವಯಿಸುವುದಿಲ್ಲ. |

**ಸಂಖ್ಯೆ: ಸಿಒ 268 ಸಿಎಲ್‌ಎಸ್ 2021**

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು